# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 21-12-2020 ರಂದು ಸಮಯ 10.30 ಗಂಟೆಗೆ ವಾರ್ಡ್ ಸಂಖ್ಯೆ: 155 ಹನುಮಂತನಗರಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತಿಮ್ಮೇಶಪ್ರಭು ಉದ್ಯಾನವನ)ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

1. ಶ್ರೀ.ಚಂದ್ರಶೇಕರ್.ಕೆ (ಕಂದಾಯ ಅಧಿಕಾರಿ ಮಹದೇವಪುರ), ನೊಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಗಿರೀಶ ವಿ. ಕುಡಾಳಕರ, ಸಹಾಯಕ ಅಭಿಯಂತರರು ವಾ.ನಂ.-155 – ಸದಸ್ಯ ಕಾರ್ಯದರ್ಶಿ
3. ಶ್ರೀ ಪ್ರಕಾಶ್ (ಕಂದಾಯ ಇಲಾಖೆ)– ಸದಸ್ಯರು
4. ಶ್ರೀಮತಿ ಭೂದೆವಿ (ತೋಟಗಾರಿಕೆ ಇನ್ಸಪೆಕ್ಟರ್)– ಸದಸ್ಯರು
5. ಶ್ರೀ. ಪಿಳ್ಳಪ್ಪ – ಸಾರ್ವಜನಿಕರು.
6. ಶ್ರೀಮತಿ ಪದ್ಮ– ಸಾರ್ವಜನಿಕರು.
7. ಶ್ರೀ ಉದಯ– ಸಾರ್ವಜನಿಕರು.
8. ಶ್ರೀ ಉಮೇಶ್– ಸಾರ್ವಜನಿಕರು.
9. ಶ್ರೀಮತಿ. ದೇವಕಿ ಎಸ್. – ಸಾರ್ವಜನಿಕರು
10. ಶ್ರೀ ಚಂದ್ರಶೇಕರ್ – ಸಾರ್ವಜನಿಕರು
11. ಶ್ರೀ ಕುಮಾರ್. – ಸಾರ್ವಜನಿಕರು.

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ 155ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ನೆರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳು.**

ಹನುಮಂತನಗರ 7ನೇ ಮುಖ್ಯ ರಸ್ತೆಯಲ್ಲಿ ಚರಂಡಿ ಕಾಮಗಾರಿ ಪ್ರಾರಂಭವಾಗಿದ್ದು ಚರಂಡಿಯ ಸಿಲ್ಟನ್ನು ಸರಿಯಾಗಿ ತೆಗೆಯಲು ಗುತ್ತಿಗೆದಾರರಿಗೆ ಸೂಚಿಸಲು ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ದೇವಕಿ ಎಸ್. ರವರು ಕೋರಿದರು.

7ನೇ ಮುಖ್ಯ ರಸ್ತೆಯಲ್ಲಿ ಚರಂಡಿ ಕಾಮಗಾರಿಯ ಸ್ಥಳವನ್ನು ಪರಿಶೀಲಿಸಿ ಕಾಮಗಾರಿಯನ್ನು ವಿಶಿಷ್ಟತೆ/ವಿಶಿಷ್ಟ ವಿವರಣೆಯಂತೆ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರಿಗೆ ಸೂಚಿಸಲಾಗುವುದು ಹಾಗೂ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಹನುಮಂತನಗರ ಹರಿಹರಗುಡ್ಡ (ತಿಮ್ಮೇಶ್ ಪ್ರಭು)ಉದ್ಯಾನವನದಲ್ಲಿ ವಾಚ್ ಮೆನ್ ಇರುವುದಿಲ್ಲ ಆದುದರಿಂದ ವಾಚ್ ಮೆನ್ ನನ್ನು ನಿಯೋಜಿಸಲು ಕ್ರಮ ಕೈಗೊಳ್ಳಲು ಹಾಜರಿದ್ದ ಶ್ರೀ. ಎಲ್.ಕುಮಾರ್ ರವರು ಕೋರಿದರು.

Scanned with CamScanner

ಸದರಿ ವಿಷಯದ ಕುರಿತು ತೋಟಗಾರಿಕೆ ಇಲಾಖೆ ಬಿ.ಬಿ.ಎಂ.ಪಿ. ರವರಿಗೆ ತಿಳಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಹನುಮಂತನಗರ ಕೆಂಪೇಗೌಡ ಈಜುಕೊಳದ ಹತ್ತಿರದಿರುವ ಕಲ್ವರ್ಟ್ ಹತ್ತಿರದಿರುವ ಡೆಬ್ರಿಸ್ ತೆಗೆಯಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ. ಚಂದ್ರು ರವರು ಕೋರಿದರು.

ಸದರಿ ಹನುಮಂತನಗರ ಕೆಂಪೇಗೌಡ ಈಜುಕೊಳದ ಹತ್ತಿರದಿರುವ ಕಲ್ವರ್ಟ್ ಕಾಮಗಾರಿಯನ್ನು ಬೃಹತ್ ಮಳೆನೀರು ಕಾಲುವೆ ಬಿ.ಬಿ.ಎಂ.ಪಿ. ರವರು ಕೈಗೊಂಡಿದ್ದು ಸದರಿ ವಿಷಯದ ಕುರಿತು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಹನುಮಂತನಗರ ಕೃಷ್ಣ ನದಿ ರಸ್ತೆ ಹತ್ತಿರದಿರುವ ಕಲ್ವರ್ಟ ಕಾಮಗಾರಿಯು ಮಂದಗತಿಯಿಂದ ನಡೆಯುತ್ತಿದ್ದು ಇದರಿಂದ ಸಾರ್ವಜನಿಕರಿಗೆ ತುಂಬ ತೊಂದರೆಯಾಗುತ್ತಿದೆ ಆದುದರಿಂದ ಸದರಿ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಿಕೊಡಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ.ಚಂದ್ರುರವರು ಕೋರಿದರು.

ಸದರಿ ಕಾಮಗಾರಿಯನ್ನು ಬೃಹತ್ ಮಳೆನೀರು ಕಾಲುವೆ ಬಿ.ಬಿ.ಎಂಪಿ. ರವರು ಕೈಗೊಂಡಿದ್ದು ಸದರಿ ವಿಷಯದ ಕುರಿತು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಹನುಮಂತನಗರ ವರ್ಷ ರುತು ರಸ್ತೆಯ ಚರಂಡಿ ಕಾಮಗಾರಿಯನ್ನು/ಹೂಳನ್ನು ತೆಗೆಯದೆ ಸುಮಾರು ವರ್ಷಗಳು ಆಗಿದ್ದು ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ.ಚಂದ್ರುರವರು ಕೋರಿದರು.

ಸದರಿ ಕಾಮಗಾರಿಯನ್ನು ಈಗಾಗಲೆ ತೆಗೆದುಕೊಂಡಿದ್ದು ಟೆಂಡರ್ ಹಂತದಲ್ಲಿರುತ್ತದೆ ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

<u>ಬೀದಿ ದೀಪ ನಿರ್ವಹಣೆ ಕುರಿತು</u>

ಹನುಮಂತನಗರ ಜಿಂಕೆ ಉದ್ಯಾನವನದಲ್ಲಿ ಬೀದಿ ದೀಪ ಉರಿಯುತ್ತಿಲ್ಲದಿರುವುದು ಹಾಗೂ ಇದನ್ನು ಸರಿಪಡಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ.ಪಿಳ್ಳಪ್ಪ ರವರು ಕೋರಿದರು.

ಸದರಿ ವಿಷಯದ ಕುರಿತು ಸಂಬಂಧಪಟ್ಟ ವಿದ್ಯುತ್ ವಿಭಾಗದ ಬಿ.ಬಿ.ಎಂ.ಪಿ. ಅಭಿಯಂತರರಿಗೆ ತಿಳಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

<u>COVID-19 ಕಾಯಿಲೆ ಕುರಿತು</u>

<u>COVID-19</u> ಕಾಯಿಲೆ ಕುರಿತು ಸಾರ್ವಜನೀಕರ ಹಿತದೃಸ್ಟಿಯಿಂದ ವಾರ್ಡ್‌ನ ನಾಗರೀಕರಿಗೆ ಉಚಿತ <u>Mobile Team</u> ರಚಿಸಿದ್ದು ಸದರಿ ಟಿಂಮನ್ನು ವಾರ್ಡಲ್ಲಿ <u>Camp</u> ಮಾಡಿ ಧ್ವನಿವರ್ಧಕ ಹಾಗೂ ಬ್ಯಾನರ್ಸ್ ಮೂಲಕ ತಪಾಸಣೆ ಮಾಡಿಸಿಕೊಳ್ಳಲು ಅರಿವು ಮೂಡಿಸಲು ಕ್ರಮಕೈಗೊಳ್ಳಲು ಹಾಗೂ ಕಟ್ಟಡ ಕಾಮಗಾರಿ ನಡೆಯುತ್ತಿದ್ದಲ್ಲಿ/ಕಮರ್ಷಿಯಲ್ ಭಾಗಗಳಲ್ಲಿ ತಪಾಸಣೆ ಕೈಗೊಳ್ಳಲು ಕ್ರಮವಹಿಸಲು ಸೆಕ್ಟರ್ ಅಧಿಕಾಯವರಿಗೆ ಸೂಚಿಸಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.

<u>COVID +V Case</u> ಕಂಡು ಬಂದ ಹಿನ್ನಲೆಯಲ್ಲಿ ರೋಗಿಯ ಮನೆಯ ಹತ್ತಿರ ತಕ್ಷಣ ಸಮರ್ಪಕವಾಗಿ <u>Sanitization</u> ಮಾಡಲು ಸಹಾಯಕ ಅಭಿಯಂತರರು ಹಾಗೂ ಹಿರಿಯ ಆರೋಗ್ಯ ಪರಿದೀಕ್ಷಕರು ವ್ಯವಸ್ಥೆ ಕಲ್ಪಿಸಲು ಸಭೆಯಲ್ಲಿ ಸೂಚಿಸಲಾಯಿತು.

Scanned with CamScanner

<u>ಆರೋಗ್ಯ ಇಲಾಖೆ</u>

ಹನುಮಂತನಗರ ವಾರ್ಡ್ ವ್ಯಾಪ್ತಿಯಲ್ಲಿರುವ ಜಿ.ಆರ್.ಟೆಂಪಲ್ಟನ್ ಅಪಾರ್ಟಮೆಂಟ್ ಎದುರು ನಾನ್ವೆಜ್ ಮಾರಾಟಮಾಡುತ್ತಿದ್ದು ಇದನ್ನು ತಡೆಗಟ್ಟಲು ಕ್ರಮಕೈಗೊಳ್ಳಲು ಸಭೆಯಲ್ಲಿ ಉಪಸ್ಥಿತರಿರುವ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಭೆಯಲ್ಲಿ ಸೂಚಿಸಲಾಯಿತು.

ಹನುಮಂತನಗರ ವಾರ್ಡ ವ್ಯಾಪ್ತಿಯಲ್ಲಿ ಪ್ರತಿ ಬ್ಲಾಕ್ ನಲ್ಲಿ ಯಾವ ಯಾವ ವಾಹನವನ್ನು ಸಾಲಿಡ್ ವೇಸ್ಟ್ ಸಂಗ್ರಹಿಸಲು ನಿಯೋಜಿಸಲಾಗಿರುವ ಕುರಿತು ಹಾಗೂ ಯಾವ ಯಾವ ಸಮಯದಲ್ಲಿ ಹಸಿ ಕಸ, ಒಣ ಕಸ ಮತ್ತು ಸ್ಯಾನಿಟರಿ ಕಸವನ್ನು ಸಂಗ್ರಹಿಸುತ್ತಾರೆ ಎಂಬುವುದನ್ನು ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ನಟರಾಜ್‌ರವರು ವಿವರವಾಗಿ ಸಭೆಯಲ್ಲಿ ತಿಳಿಸಿದರು.

ವಾರ್ಡ್ ಕಮಿಟಿ ಅಧ್ಯಕ್ಷರಾದ ಶ್ರೀ. ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ), ನೋಡಲ್ ಅಧಿಕಾರಿಗಳು ರವರು ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತ ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

21/12/2020
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ ಸಂಖ್ಯೆ-155 ಹನುಮಂತನಗರ

21.12.2020
ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ ಸಂಖ್ಯೆ-155 ಹನುಮಂತನಗರ

ಪ್ರತಿಯನ್ನು:-

1. ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮಾಹಿತಿಗಾಗಿ.
2. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
4. ಉಪ ಆಯುಕ್ತರು(ದ) ರವರಿಗೆ ಮಾಹಿತಿಗಾಗಿ.
5. ಅಧೀಕ್ಷಕ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
6. ಕಾರ್ಯಪಾಲಕ ಅಭಿಯಂತರರು ರವರಿಗೆ ಮಾಹಿತಿಗಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ.
8. ಕಛೇರಿ ಕಡತಕ್ಕೆ .

Scanned with CamScanner